ದರ್ಶನ್ ಅಭಿನಯದ 'ಯಜಮಾನ' ಕನ್ನಡ ಚಿತ್ರರಂಗದ ಇತ್ತೀಚಿನ ಬಹುದೊಡ್ಡ ಯಶಸ್ಸು. ಈ ಚಿತ್ರದ ಸಂತೋಷಕೂಟದಲ್ಲಿ ಇಬ್ಬರು ಸುದ್ದಿಗಾರರು ಗಮನಸೆಳೆದರು. ಒಬ್ಬರು, ತಮ್ಮ ಎತ್ತರದಿಂದ ಸಹಜವಾಗಿಯೇ ಗಮನಸೆಳೆಯುವ ದರ್ಶನ್. ಮತ್ತೊಬ್ಬರು ದರ್ಶನ್ ವಿರುದ್ಧ ದೇಹಾಕಾರದ ಸಂಜು ಬಸಯ್ಯ.

ದರ್ಶನ್ ಮುಖದಲ್ಲಿ ಗೆಲುವಿನ ಖುಷಿ. ಸಂಜು ಅವರ ಮುಖದಲ್ಲೂ ಸಂಭ್ರಮವಿತ್ತು. ಆದರೆ ಮಾತಿಗೆ ನಿಂತ ಅವರು, ಮಾತನಾಡಿದ್ದಕ್ಕಿಂತ ಅತ್ತಿದ್ದೇ ಹೆಚ್ಚು. ಭಾವೋತ್ಕರ್ಷಕ್ಕೆ ಒಳಗಾಗಿದ್ದ ಅವರನ್ನು ಚಿತ್ರದ ನಿರ್ದೇಶಕ ಹರಿಕೃಷ್ಣ ಸಮಾಧಾನಪಡಿಸಿದರು. ಸಂಜು ಆಡಬೇಕಿದ್ದ ಮಾತುಗಳನ್ನು ಅವರ ಗೆಳೆಯ ಶಿವರಾಜ್ ಕೆ.ಆರ್. ಪೇಟೆ ಆಡಿ ಮುಗಿಸಿದರು.

ಸಂಜು ಭಾವುಕತೆಗೆ ಕಾರಣ, ದರ್ಶನ್ ಜೊತೆ ನಟಿಸಲು ಸಿಕ್ಕ ಅವಕಾಶ. 'ಯಜಮಾನ' ಚಿತ್ರದಲ್ಲವರು ದರ್ಶನ್‌ರ ಗೆಳೆಯನ ಪಾತ್ರದಲ್ಲಿ ನಟಿಸಿದ್ದಾರೆ. ಕನ್ನಡದ ಬಹುಜನಪ್ರಿಯ ನಟನ ಜೊತೆ ನಟಿಸಲು ಸಿಕ್ಕ ಅವಕಾಶ ಅವರ ಭಾವೋತ್ಕರ್ಷಕ್ಕೆ, ಆನಂದಬಾಷ್ಪಕ್ಕೆ ಕಾರಣ.

ಕಿರುತೆರೆಯ ವೀಕ್ಷಕರಿಗೆ ಸಂಜು ಬಸಯ್ಯ ಹೊಸಬರೇನಲ್ಲ. 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಷೋ ಮೂಲಕ ಅವರು ಟೀವಿ ವೀಕ್ಷಕರ ವಲಯದಲ್ಲಿ ತಮ್ಮದೇ ಜನಪ್ರಿಯತೆ ಕಂಡುಕೊಂಡವರು. ಅದೇ ಜನಪ್ರಿಯತೆಯನ್ನು ಏಣಿಯನ್ನಾಗಿಸಿಕೊಂಡು ಚಿತ್ರರಂಗದಲ್ಲೂ ತಮ್ಮ ಅದೃಷ್ಟಪರೀಕ್ಷೆಗಿಳಿದಿದ್ದಾರೆ. ಚೊಚ್ಚಿಲ ಚಿತ್ರದಲ್ಲೇ ದರ್ಶನ್ ಜೊತೆ ನಟಿಸುವ ಮೂಲಕ ಅವರ ಬೆಳ್ಳಿತೆರೆಯ ವೃತ್ತಿಜೀವನ ಭರ್ಜರಿಯಾಗಿಯೇ ಆರಂಭವಾಗಿದೆ. ಆ ಮಟ್ಟಿಗೆ ಸಂಜು ಅದೃಷ್ಟವಂತರು. ರಿಯಾಲಿಟಿ ಷೋಗಳು ಜನಸಾಮಾನ್ಯರ ಬದುಕನ್ನೇ ಬದಲಿಸಬಲ್ಲವು ಎನ್ನುವುದಕ್ಕೆ ಸಂಜು ಒಂದು ಉದಾಹರಣೆಯಷ್ಟೇ. ಶಿವರಾಜ್ ಕೆ.ಆರ್. ಪೇಟೆ ಹಾಗೂ ನಯನಾ ಕೂಡ ಸಂಜು ಜೊತೆಯಲ್ಲಿ ರಿಯಾಲಿಟಿ ಷೋಗಳಲ್ಲಿ ಕಾಣಿಸಿಕೊಂಡು ಈಗ ಬೆಳ್ಳಿತೆರೆಯಲ್ಲಿ ಮಿನುಗುತ್ತಿದ್ದಾರೆ.

ಸಂಜುವಿನ ಜೊತೆಗೆ ಹನುಮಂತಪ್ಪ ಎನ್ನುವ ತರುಣನನ್ನು ನೆನಪಿಸಿಕೊಳ್ಳಿ. ಕೊಪ್ಪಳದ ಹಳ್ಳಿಯೊಂದರ ಈ ಹುಡುಗ ತನ್ನ ಸಂತೋಷಕ್ಕೆ ಹಾಡಿಕೊಳ್ಳುತ್ತಿದ್ದವನು. ಯಾರದೋ ಒತ್ತಾಸೆಯ ಮೇರೆ 'ಸರಿಗಮಪ' ರಿಯಾಲಿಟಿ ಷೋ ವೇದಿಕೆ ಹತ್ತಿ ನಿಂತಾಗ, ಆತನೇ ಹೇಳಿಕೊಂಡಂತೆ ಬರುತ್ತಿದ್ದುದು ನಾಲ್ಕು ಹಾಡುಗಳು ಮಾತ್ರ. ತತ್ವಪದ, ಜಾನಪದ ಗೀತೆಯಷ್ಟೇ ಹನುಮಂತಪ್ಪನಿಗೆ ಗೊತ್ತಿದ್ದುದು. ಇಂಥ ಜಾನಪದ ಪ್ರತಿಭೆ ರಿಯಾಲಿಟಿ ಷೋಗಳ ಮೂಲಕ ಸಿನಿಮಾ ಹಾಡುಗಳನ್ನು ಕಲಿತು ಜನರನ್ನು ಮೆಚ್ಚಿಸಿದ್ದು, ರನ್ನರ್ ಸ್ಥಾನದಲ್ಲಿ ನಿಂತು ಲಕ್ಷ ರೂಪಾಯಿ ಬಹುಮಾನ ಹಾಗೂ ಹದಿನೈದು ಲಕ್ಷ ರೂಪಾಯಿ ಬೆಲೆಬಾಳುವ ನಿವೇಶನ ತನ್ನದಾಗಿಸಿಕೊಂಡಿದ್ದು ಸಾಮಾನ್ಯ ಸಾಧನೆಯಲ್ಲ.

ರಾತ್ರಿ ಬೆಳಗಾಗುವಷ್ಟರಲ್ಲಿ ಸಾಮಾನ್ಯನೊಬ್ಬನನ್ನು ಸೆಲೆಬ್ರಿಟಿಯನ್ನಾಗಿ ರೂಪಿಸುವ ಮಾಯಾಶಕ್ತಿಯನ್ನು ಕಿರುತೆರೆಯ 'ರಿಯಾಲಿಟಿ ಷೋ'ಗಳು ಹೊಂದಿದೆ. ಹಳ್ಳಿ, ಹಾಡಿ, ಕೇರಿ–ಹಟ್ಟಿ ಇಲ್ಲವೇ ಕೊಳೆಗೇರಿಯ ಸಾಮಾನ್ಯ ಪ್ರತಿಭೆಯೊಂದು ಒಂದೇ ದಿನದಲ್ಲಿ ಕನ್ನಡಿಗರ ಮನೆಮಾತಾಗಿ ಮಾಡುವಲ್ಲಿ ರಿಯಾಲಿಟಿ ಷೋಗಳು ಯಶಸ್ವಿಯಾಗಿವೆ. ಮಾಯಾಪಟ್ಟಿಗೆಯ ಮೋಹಪಾಶಕ್ಕೆ ಒಳಗಾಗದೆ ಇರುವವರು ಅಪರೂಪ. ಅಲ್ಲಿನ ಅತಿರೇಕಗಳನ್ನು ಟೀಕಿಸುತ್ತಲೇ ಟೀವಿಯ ಮುಂದೆ ಕೂರುವಷ್ಟರಮಟ್ಟಿಗೆ ಕಿರುತೆರೆಯ ಸಮ್ಮೋಹಿನಿಗೆ ಸಮಾಜ ತನ್ನನ್ನು ಒಪ್ಪಿಸಿಕೊಂಡಿದೆ.

ಮನರಂಜನಾ ಮಾಧ್ಯಮದಲ್ಲಿ ರಿಯಾಲಿಟಿ ಷೋ ಇಟ್ಟ ದಿಟ್ಟ ಹೆಜ್ಜೆಗಳು ಕನ್ನಡ ಚಿತ್ರರಂಗವೇ ಕಂಪಿಸುವಷ್ಟು ಸಶಕ್ತವಾಗಿವೆ. ಚಿತ್ರರಂಗದ ಸೂಪರ್ ಸ್ಟಾರ್‌ಗಳು ಕೂಡ ಕಿರುತೆರೆಯ ಮೋಹಕ್ಕೆ ಒಳಗಾಗಿದ್ದಾರೆ. ಒಬ್ಬೊಬ್ಬರು ಒಂದೊಂದು ವಾಹಿನಿಯಲ್ಲಿ ಕಾಣಿಸಿಕೊಳ್ಳುತ್ತಿರುವುದನ್ನು ಕಂಡು ಚಿತ್ರರಂಗದಲ್ಲಿ ಅಳುಕಿನ ಕ್ಷೀಣ ಅಪಸ್ವರವೂ

